**ಅ. ದಾ. ಸಂ. ಃ 360/ 2015**
**ಪಿ .ಡಬ್ಲ್ಯೂ ಃ 02**

**ದಿನಾಂಕ ಃ 21-10-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಃ- ಪ್ರತಿವಾದಿಯ** ಪರ ಶ್ರೀ.ಆರ್. ಎಸ್ ವಕೀಲರಿಂದ ಃ-

ನಾನು ಶಿಕ್ಷಕರಾಗಿ ನಿವೃತ್ತಿ ಹೊಂದಿರುತ್ತೇನೆ. ನಾನು ಕನಕಪುರ ತಾಲ್ಲೂಕಿನಲ್ಲಿ ಸಂಪೂರ್ಣ ಸೇವೆಯನ್ನು ನಿಲ್ಲಿಸಿರುತ್ತೇನೆ. ನಾನು ಶಂಭದೇವನಹಳ್ಳಿ ಗ್ರಾಮಕ್ಕೆ ಬಂದು 5 ವರ್ಷ ಆಗಿರುತ್ತದೆ. ನಾನು 1981 ರಿಂದ ಕನಕಪುರದಲ್ಲಿಯೇ ವಾಸವಿದ್ದೇನೆ. ವಾದಿಗಳು ಎರಡು ಐಟಂಗಳಿಗೆ ದಾವೆಯನ್ನು ಹೂಡಿರುತ್ತಾರೆ. ದಾವಾಸ್ವತ್ತುಗಳಲ್ಲಿ ಒಂದು ಒಟ್ಟು ಕುಟುಂಬದ ಆಸ್ತಿ ಮತ್ತೊಂದು ಒಟ್ಟು ಕುಟುಂಬದಿಂದ ತೆಗೆದುಕೊಂಡಿರುತ್ತಾರೆ. ನಾನು ಒಟ್ಟು ಕುಟುಂಬದಿಂದ ತೆಗೆದುಕೊಂಡ ಪತ್ರವನ್ನು ನೋಡಿರುವುದಿಲ್ಲ. ಸಾಮಾನ್ಯವಾಗಿ 1971 ರಲ್ಲಿ ಆಗಿರಬಹುದು. 1971 ರಲ್ಲಿ ಆಗಿರುವ ಪತ್ರವನ್ನು ನೋಡಿಲ್ಲ. ನಾನು 1971 ರಲ್ಲಿ ಯಾವುದೇ ಪತ್ರವಾದಾಗ ಇರಲಿಲ್ಲ. ಆದರೆ ಪಕ್ಕದ ಮನೆಯವರು ಆದ್ದರಿಂದ ಗೊತ್ತಿರುತ್ತದೆ. ಪ್ರತಿವಾದಿ-2 ರಿಂದ 7 ರವರು ಮದುವೆ ಆದ ವಿಚಾರ ಪ್ರಮಾಣಪತ್ರದಲ್ಲಿ ಬರೆದಿದ್ದಾರೆ. ಆ ವಿಷಯ ನನಗೆ ಗೊತ್ತಿಲ್ಲ.

ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ಮೊದಲನೇ ಪ್ರತಿವಾದಿ ಗಂಡ ಪುಟ್ಟಲಿಂಗಯ್ಯನವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಪುಟ್ಟಲಿಂಗಯ್ಯನವರಿಗೆ ಮಾಡಬಾಳ್ ಹೋಬಳಿ, ಗ್ರಾಮ ದಲ್ಲಿ ಸರ್ವೆ ನಂ. 59/1 ರಲ್ಲಿ 3 ಎಕರೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟ ಲಿಂಗಯ್ಯನವರು ಮತ್ತು ಅವರ ಕುಟುಂಬದವರು ಸರ್ವೆ ನಂ. 59/1 ನ್ನು ಒಟ್ಟಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದರ ಚೆಕ್ಕುಬಂಧಿ ಪೂರ್ವಕ್ಕೆ ನಂಜಯ್ಯ, ಪಶ್ಚಿಮಕ್ಕೆ ಕಾಳಯ್ಯ ಉತ್ತರಕ್ಕೆ ಗಂಗಂ ನಂಜಯ್ಯ ದಕ್ಷಿಣಕ್ಕೆ ಗೋವಿಂದಯ್ಯ ಮತ್ತು ದೊಡ್ಡ ಹನುಮಯ್ಯನವರು

ಇರುತ್ತಾರೆ ಎಂದರೆ ಸರಿ. ಈ ಮಧ್ಯೆ ಜಮೀನು ಇರುತ್ತದೆ ಎಂದರೆ ಸರಿ. ಪುಟ್ಟ ಲಿಂಗಯ್ಯನವರು ಬದುಕಿದ್ದಾಗ, ಈ ಜಮೀನಿನಲ್ಲಿ ವ್ಯವಸಾಯ ಮಾಡಿ ಫಸಲನ್ನು ಅನುಭವಿಸುತ್ತಿದ್ದರು ಎಂದರೆ ಸರಿ. ಪುಟ್ಟಲಿಂಗಯ್ಯನವರ ಮೂಲ ಕಸುಬು ವ್ಯವಸಾಯ ಎಂದರೆ ಸರಿ. ಪುಟ್ಟಲಿಂಗಯ್ಯನವರ ಹೆಣ್ಣು ಮಕ್ಕಳು ದನಕರು ಹೊಲ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಪ್ರತಿವಾದಿ-1 ಮತ್ತು 3 ರವರು ಸಹ ಇಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಮೊದಲು ಮಾಡುತ್ತಿದ್ದರು ಈಗ ವಾದಿಯವರೇ ಮಾಡುತ್ತಿದ್ದಾರೆ ಮತ್ತು ಇದು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸರ್ವೆ ನಂ. 59/1 ಇದರಲ್ಲಿ ಪ್ರತಿವಾದಿಗಳಿಗೂ ಹಕ್ಕು ಇದೆ ಎಂದರೆ ಸರಿ. ಅರಸಮ್ಮನವರು ನಾನು ವಿಲ್ ಮಾಡಿದ್ದೇನೆ ಎಂದು ನನಗೆ ಹೇಳಿದ್ದರು. ಪ್ರತಿವಾದಿ-1 ರವರನ್ನು ನಾನು ಇತ್ತಿಚೆಗೆ ನೋಡಿದ್ದೆನೆ. ಪ್ರತಿವಾದಿ-1 ರವರು ಈಗ ತೀರಾ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾರೆ ಆಗಾಗಿ ಪ್ರತಿವಾದಿ-3 ರವರೇ ಅವರನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ-1 ರವರ ಊಟ ಬಟ್ಟೆ ಮತ್ತು ಔಷದಿ ಮತ್ತು ವಸತಿ ಖರ್ಚನ್ನು 3 ನೇ ಪ್ರತಿವಾದಿಗಳೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಉಳಿದ ಹೆಣ್ಣು ಮಕ್ಕಳು ಮದುವೆ ಆಗಿ ಪ್ರತ್ಯೇಕವಾಗಿ ಅವರ ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ಸರ್ವೆ ನಂ. 59/1 ರಲ್ಲಿ ದಾವಾಸ್ವತ್ತುಗಳು 3 ಎಕರೆ ಮತ್ತು ಮನೆ ಭಾಗವಾದರೆ ನನ್ನದೇನೂ ತಕರಾರು ಇರುವುದಿಲ್ಲ.

**ಮರುವಿಚಾರಣೆ ಇಲ್ಲ:**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**